❖ ಅರುಣ ಪಿ. ಭಟ್

## ತುಲಾ




ಉದ್ಯೋಗ ಬದಲಾವಣೆಗೆ ಸೂಕ್ತ ಸಮಯ. ವ್ಯಾಪಾರದಲ್ಲಿ ಹೆಚ್ಚು ಜಾಗರೂಕರಾಗಿರಿ. ವೆಚ್ಚಗಳನ್ನು ನಿಯಂತ್ರಿಸಿ. ಇಲ್ಲದಿದ್ದರೆ ಭವಿಷ್ಯದಲ್ಲಿ ಆರ್ಥಿಕ ಬಿಕ್ಕಟ್ಟು ಉಂಟಾಗಬಹುದು. ಆರೋಗ್ಯ ಸ್ಥಿರವಾಗಿರುತ್ತದೆ.

ಶುಭ: 11, 21, 28

ಅಶುಭ: 16, 22, 29

## ಮಕರ




ವಾಹನವನ್ನು ಚಲಾಯಿಸುವಾಗ ಹೆಚ್ಚು ಜಾಗರೂಕರಾಗಿರಿ. ತಿಂಗಳ ಮಧ್ಯಭಾಗದಲ್ಲಿ ಆರೋಗ್ಯಸಮಸ್ಯೆ ಕಾಣಿಸಿಕೊಳ್ಳಬಹುದು. ವ್ಯಾಪಾರಿಗಳಿಗೆ ಉತ್ತಮ ಲಾಭ. ಸಮಾಜದಲ್ಲಿ ಗೌರವ ಹೆಚ್ಚುವುದು. ಕುಟುಂಬದಲ್ಲಿ ನೆಮ್ಮದಿ.

ಶುಭ: 12, 19, 22

ಅಶುಭ: 10, 16, 21

## ವೃಶ್ಚಿಕ



ಆದಾಯ ಹೆಚ್ಚಾಗಲಿದೆ. ತಿಂಗಳ ಆರಂಭದಲ್ಲಿ ಆರ್ಥಿಕ ಪರಿಸ್ಥಿತಿ ಸಾಕಷ್ಟು ಬಲವಾಗಿರುತ್ತದೆ. ವಾಹನ ಅಥವಾ ಮನೆ ಖರೀದಿಗೆ ಪ್ರಯತ್ನಿಸಿ. ವ್ಯಾಪಾರವನ್ನು ವಿಸ್ತರಿಸಬಹುದು. ಕೋರ್ಟ್ ವ್ಯಾಜ್ಯಗಳು ನಿಮ್ಮ ಪರವಾಗಿ ಆಗುತ್ತವೆ.

ಶುಭ: 11, 16, 28

ಅಶುಭ: 10, 15, 23

## ಕುಂಭ




ಕುಟುಂಬದಲ್ಲಿ ಒಗ್ಗಟ್ಟು ಹೆಚ್ಚಾಗುತ್ತದೆ. ಮನೆ ದುರಸ್ತಿಕಾರ್ಯ ನಡೆಸುವಿರಿ. ತಂದೆತಾಯಿ ಜೊತೆ ತೀರ್ಥಯಾತ್ರೆಗೆ ಹೋಗುವಿರಿ. ಆರೋಗ್ಯ ಸಮಸ್ಯೆಗಳಾಗಬಹುದು. ಅಧಿಕಾರಿಗಳಿಂದ ಸಂಪೂರ್ಣ ಬೆಂಬಲ.

ಶುಭ: 10, 16, 23

ಅಶುಭ: 11, 19, 29

## ಧನಸ್ಸು




ಅಪೇಕ್ಷಿತ ಫಲಿತಾಂಶಗಳನ್ನು ಪಡೆಯಲು ಕಠಿಣ ಪರಿಶ್ರಮ ಪಡಬೇಕು. ಉದ್ಯೋಗ ಬದಲಾವಣೆಗೆ ಸೂಕ್ತ ಸಮಯ. ತಾಯಿಯ ಆರೋಗ್ಯದ ಬಗ್ಗೆ ಎಚ್ಚರವಿರಲಿ. ಅವರ ಬಗ್ಗೆ ಕಾಳಜಿ ವಹಿಸಿ.

ಶುಭ: 12, 20, 26

ಅಶುಭ: 11, 17, 22

## ಮೀನ



ಕುಟುಂಬ ಜೀವನದಲ್ಲಿ ಅನೇಕ ಬದಲಾವಣೆಗಳನ್ನು ಎದುರಿಸಬೇಕಾಗುವುದು. ಜಮೀನು ಖರೀದಿ ಸಾಧ್ಯತೆ. ದೊಡ್ಡ ನಿರ್ಧಾರ ತೆಗೆದುಕೊಳ್ಳುವಾಗ ಹಿರಿಯರ ಸಲಹೆ ಪಡೆಯಿರಿ. ಯಾರಿಗೂ ಸಾಲ ನೀಡದಿರಿ.

ಶುಭ: 11, 18, 26

ಅಶುಭ: 12, 16, 22